ಕರ್ನಾಟಕ ವಿಧಾನ ಸಭೆ

ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತ ವರದಿ

ಸನ್ಮಾನ್ಯ ರಾಜ್ಯಪಾಲರಾದ ಶ್ರೀಮತಿ ಪಿ.ಎಸ್.ರಮಾದೇವಿಯವರು ಕರ್ನಾಟಕ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸಂಯುಕ್ತಾಧಿವೇಶನವನ್ನು ಉದ್ದೇಶಿಸಿ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.00 ಗಂಟೆಗೆ ಮಾಡಿದ ಭಾಷಣ.

ಬುಧವಾರ, 15ನೇ ಮಾರ್ಚ್, 2000

ರಾಜ್ಯಪಾಲರು ಬೆಳಿಗ್ಗೆ 11.೦೦ ಗಂಟೆಗೆ ವಿಧಾನಸೌಧದ ಮುಖ್ಯದ್ವಾರದ ಬಳಿ ಇರುವ ದ್ವಾರಮಂಟಪಕ್ಕೆ ಆಗಮಿಸಿದರು. ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಅಧ್ಯಕ್ಷರು, ಮಾನ್ಯ ಸಭಾಪತಿಯವರು, ವಿಧಾನಸಭೆಯ ಕಾರ್ಯದರ್ಶಿಯವರು ಮತ್ತು ವಿಧಾನಪರಿಷತ್ತಿನ ಕಾರ್ಯದರ್ಶಿಯವರು ಸ್ವಾಗತಿಸಿದರು. ನಂತರ ಪೂರ್ವಭಾಗದ ಮೆಟ್ಟಲುಗಳ ಮೂಲಕ ರಾಜ್ಯಪಾಲರು ಆಗಮಿಸಿದರು. ನಂತರ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ವಿಧಾನಸಭೆಯ ಕಾರ್ಯದರ್ಶಿ	ವಿಧಾನಪರಿಷತ್ತಿನ ಕಾರ್ಯದರ್ಶಿ
ಮಾನ್ಯ ಅಧ್ಯಕ್ಷರು	ಮಾನ್ಯ ಸಭಾಪತಿಯವರು

ರಾಜ್ಯಪಾಲರು

ಎ.ಡಿ.ಸಿ

ಈ ರೀತಿಯ ಮೆರವಣಿಗೆಯು ವಿಧಾನಸಭಾ ಸದನದ ಕಡೆಗೆ ಹೊರಟಿತು. ಸಭಾ ಸದಸನದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ ರಾಜ್ಯಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗೆ ತಿಳಿಸಿದರು. ಮತ್ತು ರಾಷ್ಟ್ರ ಗೀತೆಯನ್ನು ನುಡಿಸಲಾಯಿತು. ರಾಜ್ಯಪಾಲರು ಸದನವನ್ನು ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಮಾನ್ಯ ಸದಸ್ಯರುಗಳು ಎದ್ದು ನಿಂತುಕೊಂಡಿದ್ದರು.

ಸಭಾ ಸದನದ ವೇದಿಕೆ ಮುಂದೆ ಬಂದ ಬಳಿಕ ಮೆರವಣಿಗೆಯು ಇಬ್ಭಾಗವಾಯಿತು. ವೇದಿಕೆಯ ಮೇಲೆ ಮಾನ್ಯ ಅಧ್ಯಕ್ಷರು ರಾಜ್ಯಪಾಲರ ಬಲಭಾಗದಲ್ಲಿ, ಮಾನ್ಯ ಸಭಾಪತಿಯವರು ರಾಜ್ಯಪಾಲರ ಎಡಭಾಗದಲ್ಲಿ ಕುಳಿತುಕೊಂಡರು. ರಾಜ್ಯಪಾಲರು

ಮೇಜಿನ ಮಧ್ಯಭಾಗದಲ್ಲಿನ ಆಸನದಲ್ಲಿ ಕುಳಿತುಕೊಂಡರು. ಕಾರ್ಯದರ್ಶಿಯವರು ಮೇಜಿನ ಮುಂದುಗಡೆ ಇರುವ ಆಸನದಲ್ಲಿ ಕುಳಿತುಕೊಂಡರು.

ರಾಜ್ಯಪಾಲರ ಭಾಷಣ

ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ ಹಾಗೂ ಸನ್ಮಾನ್ಯ ಸದಸ್ಯರೇ,

ರಾಜ್ಯ ವಿಧಾನ ಮಂಡಲದ ಜಂಟಿ ಅಧಿವೇಶನಕ್ಕೆ ನಿಮ್ಮನ್ನು ತುಂಬಾ ಸಂತೋಷದಿಂದ ಸ್ವಾಗತಿಸುತ್ತೇನೆ. ಇದು ಹೊಸ ಸಹಸ್ರಮಾನದ ಮೊದಲ ಅಧಿವೇಶನ. ಈ ಅಧಿವೇಶನಕ್ಕೆ ತುಂಬಾ ಮಹತ್ವವಿದೆ. ಅಲ್ಲದೆ, ನಾನು ಮೊದಲ ಬಾರಿಗೆ ಈ ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಿದ್ದೇನೆ. ಜನತೆ ಹೊಸ ನಿರೀಕ್ಷೆಗಳೊಂದಿಗೆ ಹೊಸ ಕನಸುಗಳನ್ನು ಕಾಣುತ್ತಿರುವ ಹೊಸ ಯುಗದ ಹೊಸ್ತಿಲಲ್ಲಿ ನಾವಿದ್ದೇವೆ. ಕರ್ನಾಟಕವು ಸಮೃದ್ಧ ಮತ್ತು ಪ್ರಾಚೀನ ಪರಂಪರೆಯನ್ನು ಹೊಂದಿರುವುದೇ ಅಲ್ಲದೆ ವಿಜ್ಞಾನ ಮತ್ತು ತಂತ್ರಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ತ್ವರಿತವಾಗಿ ಮುನ್ನಡೆಯುತ್ತಿದೆ. ಆಧುನೀಕರಣದ ಪ್ರಯೋಜನಗಳನ್ನು ಜನತೆಗೆ ಒದಗಿಸುವ ಮೂಲಕ ಅವರ ಜೀವನವನ್ನು ಸುಧಾರಿಸಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಈ ಬದ್ಧತೆಗೆ ಅನುಸಾರವಾಗಿ ಸರ್ಕಾರವು, ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ಕುಡಿಯುವ ನೀರು, ಆರೋಗ್ಯ, ಶಿಕ್ಷಣ, ಸಮಾಜಕಲ್ಯಾಣ ಮತ್ತು ಗ್ರಾಮೀಣ ಅಭಿವೃದ್ಧಿಯಂತಹ ಅತ್ಯಾವಶ್ಯಕ ಸುಧಾರಣೆಗೆ ಆದ್ಯತೆ ನೀಡಿ ಜನರ ಜೀವನವನ್ನು ಗಣನೀಯವಾಗಿ ಸುಧಾರಿಸಲು ದೃಢ ಸಂಕಲ್ಪ ಮಾಡಿದೆ.

2) ಕರ್ನಾಟಕವು ಸಮಾಜದ ಎಲ್ಲಾ ವರ್ಗಗಳ ಸೌಹಾರ್ದಯುತ ಸಹಬಾಳ್ವೆಗೆ ಹೆಸರುವಾಸಿಯಾಗಿದೆ. ಈ ವೈವಿಧ್ಯತೆಯು ಕರ್ನಾಟಕದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳನ್ನು ಸಮೃದ್ಧಿಗೊಳಿಸಿದೆ. ನಮ್ಮ ರಾಜ್ಯವು ಎಲ್ಲಾ ಜಾತಿ ಮತ್ತು ಪಂಗಡಗಳ ಸೌಹಾರ್ದದ ನೆಲೆವೀಡು. ಆದರೂ, ಆಗೊಮ್ಮೆ ಈಗೊಮ್ಮೆ ಸಾಮಾಜಿಕ ಶಾಂತಿಯನ್ನು ಕದಡುವ ಘಟನೆಗಳು ಸಂಭವಿಸುತ್ತವೆ. ನನ್ನ ಸರ್ಕಾರವು ಕಾನೂನು ಮತ್ತು ಶಾಂತಿಪಾಲನೆಗೆ ಬದ್ಧವಾಗಿದೆ. ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯನ್ನುಂಟು ಮಾಡುವ ಯಾವುದೇ ಯತ್ನದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.

3) ಸಂವಿಧಾನದ 73ನೇ ತಿದ್ದುಪಡಿಯ ಚೌಕಟ್ಟಿನೊಳಗೆ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ನನ್ನ ಸರ್ಕಾರವು ಬದ್ಧವಾಗಿದೆ. ಬೇಗನೆ ಪಂಚಾಯತ್ ಚುನಾವಣೆಗಳನ್ನು ನಡೆಸಲು 1999ರ ಕರ್ನಾಟಕ ಪಂಚಾಯತ್ ರಾಜ್ (ಎರಡನೆಯ ತಿದ್ದುಪಡಿ) ಅಧ್ಯಾದೇಶವನ್ನು 1999ರ ಡಿಸೆಂಬರ್‌ನಲ್ಲಿ ಹೊರಡಿಸಲಾಯಿತು. ಅಲ್ಲದೆ, ಗ್ರಾಮ ಪಂಚಾಯತಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಲು 1999ರ ಕರ್ನಾಟಕ ಪಂಚಾಯತ್ ರಾಜ್ (ಮೂರನೆಯ ತಿದ್ದುಪಡಿ) ಅಧ್ಯಾದೇಶವನ್ನು ಹೊರಡಿಸಲಾಯಿತು. ರಾಜ್ಯದಾದ್ಯಂತ ಗ್ರಾಮ

ಪಂಚಾಯತಿಗಳಿಗೆ ಚುನಾವಣೆಗಳು ಶಾಂತಿಯುತವಾಗಿ ನಡೆದಿರುವುದು ನಮಗೆ ಸಮಾಧಾನ ತಂದಿದೆ. ಇದು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ನಿಟ್ಟಿನಲ್ಲಿ ಕರ್ನಾಟಕದ ಪ್ರಯತ್ನಕ್ಕೆ ಸಂದ ಗೌರವವಾಗಿದೆ.

4) ಸೀಮಿತ ಸಂಪನ್ಮೂಲಗಳ ಮೇಲೆ ಜನಸಂಖ್ಯೆಯ ತೀವ್ರ ಒತ್ತಡ ಬೀಳುತ್ತಿರುವುದರಿಂದ ಕೃಷಿ ಉತ್ಪಾದನೆ ಹೆಚ್ಚಿಸುವುದು ಅಗತ್ಯ. ನೀರಾವರಿ ಪ್ರದೇಶದಲ್ಲಿ ಮಾತ್ರವಲ್ಲದೆ ಒಣ ಪ್ರದೇಶದಲ್ಲೂ ಉತ್ಪಾದನೆ ಹೆಚ್ಚಿಸಿದಾಗ ಮಾತ್ರ ಸ್ಥಿರ ಅಭಿವೃದ್ಧಿ ಸಾಧ್ಯ. ಈ ಉದ್ದೇಶಕ್ಕಾಗಿ ಒಂದು ಜಲಾನಯನ ಪ್ರದೇಶ ಅಭಿವೃದ್ಧಿ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ. ಧಾರವಾಡದಲ್ಲಿ ಇತ್ತೀಚೆಗೆ ನಡೆದ ''ಕೃಷಿ ಶೃಂಗ ಮೇಳ 2000''ದಲ್ಲಿ ಕೃಷಿ ಅಭಿವೃದ್ಧಿ ಮಹತ್ವವನ್ನು ಗುರುತಿಸಲಾಯಿತು. ಹಸಿವು ಮತ್ತು ಅಪೌಷ್ಟಿಕತೆ ಕುರಿತ ಸವಾಲುಗಳಿಗೆ ಈ ಮೇಳದಲ್ಲಿ ಹೆಚ್ಚಿನ ಗಮನ ನೀಡಲಾಯಿತು. ಕೃಷಿಕಾರ್ಯನೀತಿಯೊಂದನ್ನು ರೂಪಿಸಲು ಕರ್ನಾಟಕ ಕೃಷಿ ಆಯೋಗವನ್ನು ಸ್ಥಾಪಿಸುವ ಉದ್ದೇಶ ನನ್ನ ಸರ್ಕಾರಕ್ಕಿದೆ. ಕೃಷಿ ಕಾರ್ಯನೀತಿ ಮತ್ತು ಗುರಿಗಳ ಪುನರಾವಲೋಕನಕ್ಕಾಗಿ ಮಾನ್ಯ ಮುಖ್ಯ ಮಂತ್ರಿಯವರ ನೇತೃತ್ವದಲ್ಲಿ ಸಚಿವ ಸಂಪುಟದ ಉಪ ಸಮಿತಿಯೊಂದನ್ನು ರಚಿಸಲಾಗಿದೆ.

5) ತೋಟಗಾರಿಕೆ ಕ್ಷೇತ್ರದಲ್ಲಿ ಕರ್ನಾಟಕಕ್ಕೆ ದೇಶದಲ್ಲಿ ಒಂದು ಗಣನೀಯ ಸ್ಥಾನವಿದೆ. 1963ರಲ್ಲಿ ದೇಶದಲ್ಲಿಯೇ ಮೊತ್ತಮೊದಲು ತೋಟಗಾರಿಕೆಗೆ ಒಂದು ಪ್ರತ್ಯೇಕ ಇಲಾಖೆ ರಚಿಸಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ಕಳೆದ ಐದು ವರ್ಷಗಳಲ್ಲಿ ತೋಟಗಾರಿಕಾ ಪ್ರದೇಶವು ಶೇಕಡಾ 27ರಷ್ಟು ಮತ್ತು ಉತ್ಪಾದನೆಯು ಶೇಕಡಾ 22ರಷ್ಟು ಹೆಚ್ಚಿವೆ. 500 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಬಂಡವಾಳ ಹೂಡಿ, ಬೆಂಗಳೂರು ಮತ್ತು ಅದರ ಸುತ್ತಮುತ್ತ ಪುಷ್ಪ ಕೃಷಿ ಘಟಕಗಳನ್ನು ಸ್ಥಾಪಿಸಲಾಗಿದೆ. ಸಣ್ಣ ಮತ್ತು ಅತಿ ಸಣ್ಣ ರೈತರೂ ಬಳಸಬಹುದಾದ ಕಡಿಮೆ ವೆಚ್ಚದ ಹಸಿರು ಮನೆ ತಂತ್ರಜ್ಞಾನದ ಮೂಲಕ ತೋಟಗಾರಿಕೆ ಮತ್ತು ಪುಷ್ಪ ಕೃಷಿಯ ತ್ವರಿತ ಬೆಳವಣಿಗೆ ಆಗುವಂತೆ ಮಾಡಲಾಗಿದೆ.

6) ಕೃಷಿ, ಪಶುಸಂಗೋಪನೆ, ತೋಟಗಾರಿಕೆ, ಹೈನು ಅಭಿವೃದ್ಧಿ ಮತ್ತು ಸಂಬಂಧಪಟ್ಟ ಚಟುವಟಿಕೆಗಳ ಮಹತ್ವವನ್ನು ಗುರುತಿಸಿ ಕರ್ನಾಟಕ ಸರ್ಕಾರವು, ತಾಂತ್ರಿಕ ಮತ್ತು ಆರ್ಥಿಕ ನೆರವಿಗಾಗಿ ರಾಷ್ಟ್ರೀಯ ಹೈನು ಅಭಿವೃದ್ಧಿಮಂಡಳಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯು ಈ ವಲಯಗಳಿಗಾಗಿ 500 ಕೋಟಿ ರೂಪಾಯಿಗಳಿಗೂ ಮೀರಿ ಆರ್ಥಿಕ ನೆರವು ನೀಡಲಿದೆ.

7) ರಾಜ್ಯದಲ್ಲಿ ಕಡಲ ಮೀನು ಉತ್ಪಾದನೆಯು ಗರಿಷ್ಠ ಹಂತವನ್ನು ಮುಟ್ಟಿದೆ. ಹೀಗಾಗಿ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸರ್ಕಾರವು ಆದ್ಯತೆ ನೀಡುತ್ತದೆ. ನಮ್ಮ ರಾಜ್ಯವು ಕೆರೆ ಮತ್ತು ಜಲಾಶಯಗಳ ರೂಪದಲ್ಲಿ 5 ಲಕ್ಷ ಹೆಕ್ಟೇರುಗಳಿಗೂ ಹೆಚ್ಚು

ಒಳನಾಡು ಜಲಸಂಪನ್ಮೂಲ ಹೊಂದಿದ್ದು, ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಹೇರಳ ಅವಕಾಶವಿದೆ. ಈ ವಲಯದಲ್ಲಿ ಉತ್ಪಾದನೆ ಹೆಚ್ಚಳಕ್ಕೆ ವಿಸ್ತರಣೆ ಸೇವೆ ಹಾಗೂ ತರಬೇತಿಗೆ ಹೆಚ್ಚಿನ ಗಮನ ಕೊಡಲಾಗುವುದು.

8) ಹಿಪ್ಪುನೇರಳೆ ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕವು ಇಂದಿಗೂ ಮುಂಚೂಣಿಯಲ್ಲಿದೆ. ಕಳೆದ ವರ್ಷ 8,944 ಮೆಟ್ರಿಕ್ ಟನ್ ಕಚ್ಚಾ ರೇಷ್ಮೆ ಉತ್ಪಾದನೆಯಾಗಿದ್ದು, ಇದು ದೇಶದ ಒಟ್ಟು ರೇಷ್ಮೆ ಉತ್ಪಾದನೆಯ ಶೇಕಡಾ 63ರಷ್ಟು ಆಗಿರುತ್ತದೆ. ರಾಜ್ಯದಲ್ಲಿ ರೇಷ್ಮೆ ಕೃಷಿಯು ಈಗಲೂ 3 ದಶಲಕ್ಷಕ್ಕೂ ಹೆಚ್ಚು ಜನರ ಜೀವನಾಧಾರವಾಗಿದೆ. ರೇಷ್ಮೆ ಕೃಷಿವಲಯದಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ಸರ್ಕಾರವು ಹಲವಾರು ಕ್ರಮ ತೆಗೆದುಕೊಳ್ಳುತ್ತಿದೆ.

9) ರಾಜ್ಯದ ಕೆಲವು ಸಣ್ಣ ಮತ್ತು ಮಧ್ಯಮ ಪ್ರಮಾಣದ ಪಟ್ಟಣಗಳಲ್ಲಿನ ಕುಡಿಯುವ ನೀರಿನ ಕೊರತೆಯು ರಾಜ್ಯ ಸರ್ಕಾರಕ್ಕೆ ತೀವ್ರ ಆತಂಕ ಉಂಟು ಮಾಡಿದೆ. ಈ ಸಮಸ್ಯೆ ಪರಿಹರಿಸಲು ರಾಜ್ಯ ಸರ್ಕಾರವು 485 ಕೋಟಿ ರೂಪಾಯಿ ವೆಚ್ಚದಲ್ಲಿ ಮುಂದಿನ ನಾಲ್ಕು ವರ್ಷಗಳೊಳಗೆ ಸುರಕ್ಷಿತ ಕುಡಿಯುವ ನೀರನ್ನು ಈ ಎಲ್ಲಾ ಪಟ್ಟಣಗಳಿಗೂ ಸರಬರಾಜು ಮಾಡಲು ಒಂದು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದೆ. ಈ ಕಾರ್ಯವನ್ನು ಹುಡ್ಕೋ ನೆರವಿನೊಂದಿಗೆ ಕೈಗೊಳ್ಳಲಾಗುವುದು.

10) ರಾಜ್ಯದಲ್ಲಿ ಆರೋಗ್ಯ ಸೇವಾ ವ್ಯವಸ್ಥೆಯನ್ನು ಸುಧಾರಿಸುವ ಸಲುವಾಗಿ ಕ್ರಮಗಳನ್ನು ಶಿಫಾರಸ್ಸು ಮಾಡಲು ಡಾ॥ ಹೆಚ್.ಸುದರ್ಶನ್ ಅವರ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಕಾರ್ಯಾಚರಣೆ ದಳವನ್ನು ರಚಿಸಲಾಗಿದೆ. ರಾಜ್ಯದಲ್ಲಿ ಮೂಲಭೂತ ಕನಿಷ್ಠ ಸೇವೆಗಳನ್ನು ಬಲಪಡಿಸುವ ಸಲುವಾಗಿ ಒಂದು ಯೋಜನೆಯನ್ನು ರೂಪಿಸಲಾಗುತ್ತಿದೆ. ಕರ್ನಾಟಕವು ಜನಸಂಖ್ಯಾ ಸ್ಥಿರತೆ ಕಾಪಾಡುವಲ್ಲಿ ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿದೆ.

11) ಕಳೆದ ದಶಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತಾ ಕ್ಷೇತ್ರಗಳಲ್ಲಿ ನಾವು ಗಮನಾರ್ಹ ಸಾಧನ ಮಾಡಿದ್ದೇವೆ. ಆದಾಗ್ಯೂ ಈ ಕ್ಷೇತ್ರದಲ್ಲಿ ಇನ್ನೂ ಸಾಕಷ್ಟು ಕೆಲಸ ಆಗಬೇಕಾಗಿದೆ. ಹೊಸ ಸಹಸ್ರಮಾನದ ಮೊದಲ ವರ್ಷದಲ್ಲಿ 11,000 ಹೆಚ್ಚಿನ ಶಾಲಾ ಕೊಠಡಿಗಳನ್ನು ಒದಗಿಸಿ ಇನ್ನೂ 7500 ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ನೇಮಿಸಿ ಕಳೆದ ದಶಕದ ಸಾಧನೆಯನ್ನು ಒಗ್ಗೂಡಿಸಿದ್ದೇವೆ. ರಾಜ್ಯದಲ್ಲಿ ಏಕೋಪಾಧ್ಯಾಯ ಶಾಲೆಗಳು ಇರದಂತೆ ಮತ್ತು ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕ-ವಿದ್ಯಾರ್ಥಿ ಪ್ರಮಾಣವು 1:40 ರಷ್ಟು ಇರುವಂತೆ ನೋಡಿಕೊಳ್ಳಲು ಜಿಲ್ಲೆಗಳಲ್ಲಿ ಶಿಕ್ಷಕರನ್ನು ಪುನಃ ನಿಯುಕ್ತಿಗೊಳಿಸಲು ಉದ್ದೇಶಿಸಲಾಗಿದೆ. ಕೈಗಾರಿಕಾ ವಲಯದ ಮಾನವ ಶಕ್ತಿಯ ಅಗತ್ಯತೆಯನ್ನು ಪೂರೈಸಲು, ಅಗತ್ಯವಿರುವ ಕ್ಷೇತ್ರಗಳಲ್ಲಿ ಇಂಜಿನೀಯರಿಂಗ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಮತ್ತು ಕಾಲೇಜುಗಳಲ್ಲಿ ಪಠ್ಯ

ಕ್ರಮದ ಒಂದು ಭಾಗವಾಗಿ ಕಂಪ್ಯೂಟರ್ ಶಿಕ್ಷಣವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಸುಸಜ್ಜಿತ ಮತ್ತು ಸಮರ್ಥ ಕಾಲೇಜುಗಳಿಗೆ ಸ್ವಾಯತ್ತತೆ ನೀಡಲು ನಿಯಮಗಳನ್ನು ರಚಿಸಲಾಗುವುದು.

12) ಮಹಿಳೆಯರ ಸ್ಥಾನಮಾನದಲ್ಲಿ ಪ್ರಗತಿ ಮತ್ತು ಸುಧಾರಣೆ ತರಲು ನನ್ನ ಸರ್ಕಾರವು ಕಂಕಣಬದ್ಧವಾಗಿದೆ. ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ದೊರಕಿಸಿಕೊಡಲು ವಿಕಾಸಿನಿ, ನವಜೀವನ, ಮತ್ತು ಸ್ವಶಕ್ತಿ ಮುಂತಾದ ವಿವಿಧ ಯೋಜನೆಗಳ ಅಡಿಯಲ್ಲಿ ಹಣಕಾಸು ನೆರವು ನೀಡಲಾಗುತ್ತಿದೆ. ಐಸಿಡಿಎಸ್ ಕಾರ್ಯಕ್ರಮದ ಅಡಿಯಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರ, ಆರೋಗ್ಯ ಸೇವೆಗಳು ಮತ್ತು ಪದ್ಧತಿಯೇತರ ಶಿಕ್ಷಣ ಒದಗಿಸಲಾಗುತ್ತಿದೆ. ಪ್ರಸಕ್ತ ವರ್ಷದಲ್ಲಿ, ಬಾಲಕಿಯರಿಗೆ ವಿದ್ಯಾರ್ಥಿವೇತನ, ಉದ್ಯೋಗಸ್ಥ ಮಹಿಳೆಯರು ಹಾಗೂ ಬಾಲಕಿಯರಿಗೆ ಹಾಸ್ಟಲ್‌ಗಳಲ್ಲಿ ಸ್ಥಳಾವಕಾಶ, ಗ್ರಾಮೀಣ ಮಹಿಳೆಯರಿಗೆ ಸ್ವಯಂ ಉದ್ಯೋಗದಲ್ಲಿ ತರಬೇತಿ-ಇವುಗಳಿಗೆ ಆದ್ಯತೆ ನೀಡಲಾಗುವುದು.

13) ನನ್ನ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಸರ್ವಾಂಗೀಣ ಅಭಿವೃದ್ಧಿಗೆ ಬದ್ಧವಾಗಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನೇರವಾಗಿ ಪ್ರಯೋಜನ ಆಗುವಂತಹ ಮತ್ತು ಅವರ ಜೀವನದ ಗುಣಮಟ್ಟವನ್ನು ಸುಧಾರಿಸುವಂತಹ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳು ಇಲ್ಲದಿರುವಂತಹ ಜಿಲ್ಲೆಗಳಲ್ಲಿ ಏಳು ಹೊಸ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅವರಿಗೆ ಉತ್ತಮ ವಸತಿ ಸೌಕರ್ಯ ಒದಗಿಸುವುದಕ್ಕಾಗಿ 85 ಹೊಸ ವಿದ್ಯಾರ್ಥಿನಿಲಯಗಳ ನಿರ್ಮಾಣವನ್ನು ಪ್ರಾರಂಭಿಸಲಾಗಿದೆ.

14) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ನಿರುದ್ಯೋಗ ಯುವಜನರು ಉದ್ಯೋಗ ರಂಗದಲ್ಲಿ ಸ್ಪರ್ಧಿಸಿ ಯಶಸ್ವಿಯಾಗುವಂತೆ ಮಾಡಲು ಅವರಿಗೆ ವಿಶೇಷ ಕೌಶಲ್ಯಗಳನ್ನು ಕಲ್ಪಿಸಿಕೊಡಲು ನನ್ನ ಸರ್ಕಾರವು ಉದ್ದೇಶಿಸಿದೆ. ಈ ಕಾರ್ಯಕ್ರಮದ ಅಂಗವಾಗಿ, ತರಬೇತಿ ಪಡೆದ ಅಭ್ಯರ್ಥಿಗಳು ಉದ್ಯೋಗದ ಸಂದರ್ಶನಗಳಲ್ಲಿ ಚೆನ್ನಾಗಿ ಉತ್ತರಿಸಲು ಸಾಧ್ಯವಾಗುವಂತೆ ಅವರಿಗೆ ಸಲಹೆ ನೀಡುವ ಮತ್ತು ಸೂಕ್ತ ಉದ್ಯೋಗ ಪಡೆಯಲು ನೆರವು ನೀಡುವ ಒಂದು ಘಟಕವನ್ನು ತೆರೆಯಲು ಉದ್ದೇಶಿಸಲಾಗಿದೆ. ಸ್ವಯಂ ಉದ್ಯೋಗದಲ್ಲಿ ನಿರತರಾಗಲು ಬೇಕಾದ ಕೌಶಲ್ಯಗಳನ್ನು ಅವರು ಗಳಿಸಿಕೊಳ್ಳುವಂತೆ ಮಾಡುವುದಕ್ಕೂ ವಿಶೇಷ ಒತ್ತನ್ನು ನೀಡಲಾಗುವುದು.

15) ಸಹಕಾರ ವಲಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ

ಸದಸ್ಯರಿಗಾಗಿ ಸರ್ಕಾರವೇ ಷೇರು ಬಂಡವಾಳವನ್ನು ನೀಡುವಂತಹ ಒಂದು ಯೋಜನೆಯನ್ನು ಪ್ರಾರಂಭಿಸಲಾಗುವುದು. ಈ ಯೋಜನೆಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಸಹಕಾರ ಸಂಘಗಳ ಸದಸ್ಯರಾಗುವುದಕ್ಕೆ ಸಹಾಯ ದೊರುಕುವುದಲ್ಲದೆ ಆರ್ಥಿಕವಾಗಿ ಅವರು ಉತ್ತಮ ಸ್ಥಿತಿಗೆ ಬರಲು ಅನುಕೂಲವಾಗುತ್ತದೆ.

16) ಹಿಂದುಳಿದ ವರ್ಗಗಳ ಕಲ್ಯಾಣದ ಬಗ್ಗೆಯೂ ನನ್ನ ಸರ್ಕಾರವು ಅಷ್ಟೇ ಬದ್ಧವಾಗಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು, ಹಿಂದುಳಿದ ವರ್ಗಗಳ ಫಲಾನುಭವಿಗಳಿಗಾಗಿ ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. 1999-2000ದ ಸಾಲಿನಲ್ಲಿ ಹಿಂದುಳಿದ ವರ್ಗಗಳ ಬಾಲಕಿಯರಿಗಾಗಿ ಹೊಸದಾಗಿ ಹದಿನೈದು ಮೆಟ್ರಿಕ್ ಪೂರ್ವ ಮತ್ತು ಹತ್ತು ಮೆಟ್ರಿಕ್ ತರುವಾಯದ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ.

17) ಅಲ್ಪಸಂಖ್ಯಾತರ ಅಭಿವೃದ್ಧಿನಿಗಮವು, ಅಲ್ಪಸಂಖ್ಯಾತ ವರ್ಗಗಳ ಫಲಾನುಭವಿಗಳಿಗಾಗಿ, ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಪ್ರಸಕ್ತ ವರ್ಷದಲ್ಲಿ ಅಲ್ಪಸಂಖ್ಯಾತರಿಗೆ ಹೊಸ ಹೊಸ ತಂತ್ರಜ್ಞಾನಗಳಲ್ಲಿ ತರಬೇತಿ ನೀಡುವುದಕ್ಕೆ ಒತ್ತನ್ನು ನೀಡಲಾಗುವುದು. ಅಲ್ಪಸಂಖ್ಯಾತರಿಗೆಂದೇ ನಾಲ್ಕು ನಿವಾಸಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಅಲ್ಪಸಂಖ್ಯಾತ ಸಮುದಾಯದ ವ್ಯಕ್ತಿಗಳು ಸಹಕಾರ ಸಂಘಗಳ ಸದಸ್ಯರಾಗಲು ಸರ್ಕಾರವೇ ಷೇರು ಬಂಡವಾಳವನ್ನು ನೀಡುವ ಯೋಜನೆಯನ್ನು ಪ್ರಾರಂಭಿಸಲಾಗುವುದು.

18) ನನ್ನ ಸರ್ಕಾರವು ನಮ್ಮ ರೈತರ ಹೊಲಗಳಿಗೆ ನೀರನ್ನು ಒದಗಿಸುವಂತಹ ಹಾಗೂ ಈಗ ಮುಕ್ತಾಯದ ವಿವಿಧ ಹಂತಗಳಲ್ಲಿರುವ, ಭಾರಿ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಅತ್ಯಂತ ಆದ್ಯತೆ ನೀಡಿದೆ. ನಾರಾಯಣಪುರ ಬಲದಂಡೆ ಕಾಲುವೆ ಹಾಗೂ ಜೇವರ್ಗಿ ಶಾಖಾಕಾಲುವೆಯಲ್ಲಿ ನೀರನ್ನು ಬಿಡುಗಡೆ ಮಾಡಿರುವುದು ಈ ವಲಯದಲ್ಲಿನ ಇತ್ತೀಚಿನ ಸಾಧನೆಯಾಗಿದೆ. ನೀರು ಬಳಕೆದಾರರ ಸಹಕಾರ ಸಂಘಗಳನ್ನು ಸ್ಥಾಪಿಸಿ ನೀರಾವರಿ ವ್ಯವಸ್ಥೆಯ ಸಮರ್ಥ ನಿರ್ವಹಣೆಗೆ ಒಂದು ಪ್ರಮುಖ ಕ್ರಮವನ್ನು ಕೈಗೊಳ್ಳಲಾಗಿದೆ. ಈ ಸಹಕಾರಿ ಸಂಘಗಳ ಮೂಲಕ ರೈತರೇ ನೀರಿನ ವಿತರಣೆ ಕಾರ್ಯವನ್ನು ನಿರ್ವಹಿಸುತ್ತಾರೆ ಹಾಗೂ ಮೇಲ್ವಿಚಾರಣೆ ಮಾಡುತ್ತಾರೆ.

19) ಕಾವೇರಿ ನ್ಯಾಯ ಮಂಡಳಿಯು ಕಾವೇರಿ ನದಿ ತೀರದ ರಾಜ್ಯಗಳ ನಡುವಿನ ವಿವಾದದ ಬಗ್ಗೆ ನ್ಯಾಯ ನಿರ್ಣಯ ಮಾಡುತ್ತದೆ. ಕಾವೇರಿ ಕಣಿವೆಯ ರೈತರ ಹಿತಾಸಕ್ತಿಗಳನ್ನು ಕಾಪಾಡಲು ನನ್ನ ಸರ್ಕಾರವು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಹಾಗೆಯೇ ಕೃಷ್ಣಾ ಕಣಿವೆ ನೀರಿನಲ್ಲಿ ರಾಜ್ಯದ ಪಾಲನ್ನು

ಸದುಪಯೋಗಪಡಿಸಿಕೊಳ್ಳಲು ನನ್ನ ಸರ್ಕಾರವು ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತದೆ.

20) ಕೇಂದ್ರ ಸರ್ಕಾರದ ತ್ವರಿತಗತಿಯ ನೀರಾವರಿ ಪ್ರಯೋಜನ ಕಾರ್ಯಕ್ರಮದ ಅಡಿಯಲ್ಲಿ ಯುಕೆಪಿ ಘಟ್ಟ-I, ಹಂತ-III, ಮಲಪ್ರಭ, ಹಿರೇಹಳ್ಳ, ಘಟಪ್ರಭ ಘಟ್ಟ-III ಮತ್ತು ಕಾರಂಜಾ ನೀರಾವರಿ ಯೋಜನೆಗಳಿಗೆ 246 ಕೋಟಿ ರೂ.ಗಳನ್ನು ಪಡೆಯಲಾಗಿದೆ.

21) ಹೊಸ ನೀರಾವರಿ ಯೋಜನೆಗಳಲ್ಲಿ ಪರಿಸರದ ಸಮತೋಲವನ್ನು ಕಾಪಾಡಿಕೊಂಡು ಬರಲು ರಾಜ್ಯದಲ್ಲಿಯ ನೀರಾವರಿ ಯೋಜನೆಗಳ ಕಾಲುವೆಗಳ, ಉಪ ಕಾಲುವೆಗಳ ಮತ್ತು ಶಾಖಾ ಕಾಲುವೆಯುದ್ದಕ್ಕೂ ಗಿಡಮರಗಳನ್ನು ಬೆಳೆಸಲು ಯೋಜಿಸಲಾಗಿದೆ. 2000-2001ರಲ್ಲಿ ಸಣ್ಣ ನೀರಾವರಿ ಕೆರೆಗಳ ಹೂಳನ್ನು ತೆಗೆಯುವ ಮತ್ತು ದುರಸ್ತಿ ಮಾಡುವ ಒಂದು ಭಾರಿ ಯೋಜನೆಯನ್ನು ಜಾರಿಗೆ ತರಲು ಯೋಜಿಸಲಾಗಿದೆ.

22) ಆರ್ಥಿಕವಾಗಿ ದುರ್ಬಲರಾಗಿರುವ ಜನರಿಗಾಗಿ ಪ್ರತಿ ವರ್ಷವೂ 2 ಲಕ್ಷ ಮನೆಗಳನ್ನು ಕಟ್ಟಿಸಿಕೊಡುವ ಕಾರ್ಯಕ್ರಮವನ್ನು ನನ್ನ ಸರ್ಕಾರ ಹಮ್ಮಿಕೊಂಡಿದೆ. ವ್ಯಾಪಕ ವಸತಿ ಕಾರ್ಯಕ್ರಮವನ್ನು ಸಮರ್ಥವಾಗಿ ಹಾಗೂ ತ್ವರಿತವಾಗಿ ಜಾರಿಗೆ ತರುವುದಕ್ಕಾಗಿ ಸರ್ಕಾರವು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಸ್ಥಾಪನೆಗೆ ಮಂಜೂರಾತಿ ನೀಡಿದೆ. ಈ ಹೊಸ ನಿಗಮವು, ಗ್ರಾಮೀಣ ಮತ್ತು ನಗರದ ಆಶ್ರಯ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ಮತ್ತು ಗಣಿ ಕೆಲಸಗಾರರ, ಬೀಡಿ ಕೆಲಸಗಾರರ, ಮೀನುಗಾರರ, ಹಮಾಲರ, ನೇಕಾರರ ಮತ್ತು ಅಸಂಘಟಿತ ವಲಯದ ಇತರ ಕೆಲಸಗಾರರ ವಸತಿ ಯೋಜನೆಗಳೂ ಸೇರಿದಂತೆ ಬಡಜನರಿಗಾಗಿ ವಸತಿ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುತ್ತಿದೆ. ಇಂದಿರಾ ಆವಾಸ ಯೋಜನೆಯನ್ನು ಜಾರಿಗೊಳಿಸುವುದನ್ನು ಜಿಲ್ಲಾ ಪಂಚಾಯತಿಗಳು ಮುಂದುವರಿಸುತ್ತವೆ.

23) ರಸ್ತೆಗಳು ಆರ್ಥಿಕ ಅಭಿವೃದ್ಧಿ ಹಾಗೂ ಸಂಪರ್ಕ ವ್ಯವಸ್ಥೆಯ ಜೀವನಾಡಿಗಳಾಗಿರುವುದರಿಂದ ನನ್ನ ಸರ್ಕಾರವು ಹೆದ್ದಾರಿಗಳ, ಸೇತುವೆಗಳ ಮತ್ತು ರಸ್ತೆಗಳ ಸುಧಾರಣೆಗೆ ಪ್ರಾಮುಖ್ಯತೆ ನೀಡಿದೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು ಪ್ರಮುಖ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲು ಈಗಾಗಲೇ 200 ಕೋಟಿ ರೂ.ಗಳನ್ನು ಸಂಗ್ರಹಿಸಿದೆ. ಈ ನಿಗಮವು ರಾಜ್ಯದಾದ್ಯಂತ 131 ಸೇತುವೆಗಳ ದುರಸ್ತಿ ಮತ್ತು ನಿರ್ಮಾಣದ ಬೃಹತ್ ಯೋಜನೆಯೊಂದನ್ನು ಸಹ ಕೈಗೆತ್ತಿಕೊಂಡಿದೆ. ಈ ಸೇತುವೆಗಳು 9 ರಿಂದ 24 ತಿಂಗಳ ಒಳಗಾಗಿ ಪೂರ್ಣಗೊಳ್ಳಲಿವೆ. ಪ್ರಮುಖ ರಾಜ್ಯ ಹೆದ್ದಾರಿಗಳು ಮತ್ತು ಮುಖ್ಯ ಜಿಲ್ಲಾ ರಸ್ತೆಗಳ ಸುಧಾರಣೆಗೆ ನನ್ನ ಸರ್ಕಾರವು ವಿಶೇಷ ಗಮನ ನೀಡುವುದು. ಈ ದಿಸೆಯಲ್ಲಿ ಕಾಮಗಾರಿಯನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಗ್ರಾಮೀಣ ರಸ್ತೆಗಳ ಸುಧಾರಣೆಗೂ ವಿಶೇಷ ಕ್ರಮ ಕೈಗೊಳ್ಳಲಾಗಿದೆ. ಹೊಸದಾಗಿ

ಸೃಜಿಸಿದ ಗ್ರಾಮೀಣ ಅಭಿವೃದ್ಧಿ ಇಂಜಿನಿಯರಿಂಗ್ ಇಲಾಖೆಯ ಮುಂಬರುವ ವರ್ಷದಲ್ಲಿ 10,000 ಕಿ.ಮಿ. ರಸ್ತೆಯನ್ನು ಸುಧಾರಿಸುವ ಮತ್ತು ಅಭಿವೃದ್ಧಿಗೊಳಿಸುವ ಗುರಿ ಹೊಂದಿದೆ.

24) ವಿದ್ಯುತ್ ಕ್ಷೇತ್ರದಲ್ಲಿ ನನ್ನ ಸರ್ಕಾರವು ವಿದ್ಯುಚ್ಛಕ್ತಿಯನ್ನು ಎಲ್ಲಾ ವರ್ಗದ ಜನತೆಗೆ ಕಡಿಮೆ ಬೆಲೆಯಲ್ಲಿ ಹಾಗೂ ಸಮರ್ಪಕವಾಗಿ ಒದಗಿಸಲು ಉದ್ದೇಶಿಸಿದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ದರಗಳ ನಿರ್ಧರಣೆ, ಪ್ರಸರಣ ಹಾಗೂ ವಿತರಣಾ ಕೇಂದ್ರಗಳಿಗೆ ಲೈಸೆನ್ಸ್ ನೀಡಿಕೆ ಮತ್ತು ಈ ವಲಯಗಳಲ್ಲಿ ಅಗತ್ಯವಾದ ಸುಧಾರಣೆಗಳ ಮೇಲ್ವಿಚಾರಣೆ ಮುಂತಾದ ಜವಾಬ್ದಾರಿಯನ್ನು ನೀಡಲಾಗಿದೆ. ಸಾಗಣೆ ಮತ್ತು ವಿತರಣೆ ಕಾಲದಲ್ಲಿ ವಿದ್ಯುತ್ ನಷ್ಟವನ್ನು ಕಡಿಮೆ ಮಾಡಲು ತಾಂತ್ರಿಕ ಹಾಗೂ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

25) ವಿದ್ಯುತ್ ವಿತರಣೆಯನ್ನು ಖಾಸಗೀಕರಣಗೊಳಿಸುವುದಕ್ಕೆ ಸರ್ಕಾರ ತಾತ್ವಿಕವಾಗಿ ಅನುಮೋದನೆ ನೀಡಿದೆ. ವಿತರಣೆ ಕಾರ್ಯದಲ್ಲಿ ಖಾಸಗಿ ವಲಯದ ಸಮರ್ಥ ಆಡಳಿತ ಮತ್ತು ಬಂಡವಾಳ ಹೂಡಿಕೆಗಾಗಿ ಒಂದು ಸಮಗ್ರ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವುದು. ಮುಂದಿನ ಎರಡು ವರ್ಷಗಳ ಒಳಗೆ ಈ ಕ್ಷೇತ್ರದಲ್ಲಿ ಖಾಸಗಿಯವರು ಪಾಲ್ಗೊಳ್ಳುವರೆಂಬ ಭರವಸೆ ನಮಗಿದೆ. ನಾವು 2000ದ ಫೆಬ್ರವರಿ 12ರಂದು ಭಾರತ ಸರ್ಕಾರದೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿದ್ದು, ಈ ಬಗ್ಗೆ ಭಾರತ ಸರ್ಕಾರದ ಬೆಂಬಲ ನಮಗಿದೆ. ಈ ಪ್ರಯತ್ನಕ್ಕೆ ವಿಶ್ವಬ್ಯಾಂಕೂ ಸೇರಿದಂತೆ ಹಣಕಾಸು ಏಜನ್ಸಿಗಳಿಂದ ಸಹಾಯ ಪಡೆದುಕೊಳ್ಳುವ ಭರವಸೆ ನಮಗಿದೆ. ವಾಯುಶಕ್ತಿ, ಕಿರು ಜಲವಿದ್ಯುತ್ ಮತ್ತು ಸಕ್ಕರೆ ಕಾರ್ಖಾನೆಗಳಲ್ಲಿ ಸಹ ಉತ್ಪಾದನೆ ಮುಂತಾದ ಪುನರ್ ನವೀಕರಿಸಬಹುದಾದ ವಿದ್ಯುತ್ ಮೂಲಗಳಿಗೂ ನನ್ನ ಸರ್ಕಾರವು ಉತ್ತೇಜನ ನೀಡುತ್ತಿದೆ. ಕೈಗಾ ಅಣು ಸ್ಥಾವರವು 1999ರ ಡಿಸೆಂಬರ್‌ನಿಂದ ಉತ್ಪಾದನೆಯನ್ನು ಪ್ರಾರಂಭಿಸಿದೆ. ಅಲ್ಲಿ ಉತ್ಪಾದಿಸಲಾಗುವ 220 ಮೆಗಾವಾಟ್‌ಗಳಲ್ಲಿ ಕರ್ನಾಟಕದ ಪಾಲು 54 ಮೆಗಾವಾಟ್. ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ viiನೇ ಘಟಕದ (210 ಮೆಗಾವಾಟ್) ಮತ್ತು ವಿಜಯನಗರ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳ (500 ಮೆಗಾವಾಟ್) ಕೆಲಸವನ್ನು ಇಷ್ಟರಲ್ಲಿಯೇ ಪ್ರಾರಂಭಿಸಲಾಗುವುದು.

26) ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪ್ರಯಾಣಿಕರ ಸೌಲಭ್ಯಗಳು ಮತ್ತು ಸೌಕರ್ಯಗಳನ್ನು ಸುಧಾರಣೆ ಮಾಡುವ ಹೊಸ ಸಾರಿಗೆ ನೀತಿ ಕುರಿತು ಸರ್ಕಾರವು ಪರಿಶೀಲಿಸುತ್ತಿದೆ. ಬೆಂಗಳೂರು ನಗರದಲ್ಲಿ ಸಾರ್ವಜನಿಕರ ಸಾರಿಗೆಯನ್ನು ಸುಧಾರಿಸಲು ಕೆಲವು ಆಯ್ದ ಮಾರ್ಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಒಯ್ಯುವ ಮೆಟ್ರೋ ಬಸ್ಸುಗಳ ಸಂಚಾರವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. 2000-2001ನೇ ವರ್ಷದಲ್ಲಿ ಗುಲ್ಬರ್ಗಾ, ಬೀದರ್, ಯಾದಗಿರಿ, ಕೊಪ್ಪಳ, ಬಳ್ಳಾರಿ

ಮತ್ತು ರಾಯಚೂರುಗಳನ್ನೊಳಗೊಂಡ ಹೊಸ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

27) ಕೈಗಾರಿಕಾ ವಲಯದಲ್ಲಿನ ಹಿಂಜರಿತದ ಅವಧಿಯ ತರುವಾಯ, ರಾಜ್ಯ ಆರ್ಥಿಕ ಸ್ಥಿತಿ ಕ್ರಮೇಣ ಸುಧಾರಿಸುತ್ತಿದೆ. ಕೈಗಾರಿಕಾ ಬಂಡವಾಳ ಹೂಡಿಕೆಗೆ ಕರ್ನಾಟಕವನ್ನು ಹೆಚ್ಚು ಪ್ರಶಸ್ತ ಸ್ಥಳವನ್ನಾಗಿ ಮಾಡಲು ಬಂಡವಾಳ ಹೂಡಿಕೆದಾರರಿಗೆ ಅನುಕೂಲಕರವಾದ ವಾತಾವರಣವನ್ನು ಸರ್ಕಾರವು ಸೃಜಿಸಿದೆ. ಜಾಗತಿಕ ಬಂಡವಾಳ ಹೂಡಿಕೆದಾರರ ಸಭೆಯೊಂದನ್ನು 2000ದ ಜೂನ್ ತಿಂಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ. ನನ್ನ ಸರ್ಕಾರವು ಸಣ್ಣ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗೆ ಮತ್ತು ಪುನರ್‌ಸಜ್ಜೀಕರಣಕ್ಕೆ ಬದ್ಧವಾಗಿದೆ.

28) ನನ್ನ ಸರ್ಕಾರಕ್ಕೆ ಎಲ್ಲಾ ಕ್ಷೇತ್ರಗಳ ಜನರಿಗೆ ಅತ್ಯಾವಶ್ಯಕ ಸೇವಾ ವ್ಯವಸ್ಥೆಗಳ ಬಗ್ಗೆ ತಿಳಿಯಪಡಿಸುವ ಹಾಗೂ ಅವುಗಳನ್ನು ಸರಳಗೊಳಿಸುವ ಮತ್ತು ವಿದ್ಯಾವಂತ ಯುವಜನರಿಗೆ ಉದ್ಯೋಗ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಮಾಹಿತಿ ತಂತ್ರಜ್ಞಾನದ ಮಹತ್ವದ ಅರಿವಿದೆ. ಈ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಒಂದು ಮಾಹಿತಿ ತಂತ್ರಜ್ಞಾನ ಕಾರ್ಯಾಚರಣೆ ದಳವನ್ನು ಸ್ಥಾಪಿಸಲಾಗಿದೆ. ಇನ್‌ಫೋಸಿಸ್ ಲಿಮಿಟೆಡ್‌ನ ಅಧ್ಯಕ್ಷರಾದ ಶ್ರೀ ಎನ್. ಆರ್. ನಾರಾಯಣಮೂರ್ತಿಯವರು ಇದರ ಅಧ್ಯಕ್ಷರಾಗಿದ್ದಾರೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪ್ರಸಿದ್ಧ ಉದ್ಯಮಿಗಳಾದ, ವಿಪ್ರೊ ಸಂಸ್ಥೆಯ ಶ್ರೀ ಅಜೀಮ್ ಪ್ರೇಮ್‌ಜಿ ಹಾಗೂ ಸೈಕಾಮೋರ್ ನೆಟ್‌ವರ್ಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಗುರುರಾಜ ದೇಶಪಾಂಡೆಯವರು ಈ ಕಾರ್ಯಾಚರಣೆ ದಳದ ಸದಸ್ಯರಾಗಿದ್ದಾರೆ.

29) ನಾಗರಿಕರಿಗೆ ಮಾಹಿತಿ ಹಕ್ಕು ಇರಬೇಕು ಎಂಬುದು ನಮ್ಮ ಸರ್ಕಾರದ ನಂಬಿಕೆ. ಸರ್ಕಾರದ ಅತ್ಯಾವಶ್ಯಕ ಸೇವೆಗಳ ಬಗ್ಗೆ ''ಒಂದು ಕಡೆ'' ಮಾಹಿತಿ ಸಿಗುವಂತೆ ಮಾಡುವ ಸಲುವಾಗಿ, ಸರ್ಕಾರವು ಹಲವಾರು ಸಾರ್ವಜನಿಕ ಸ್ಥಳಗಳಲ್ಲಿ ಅತ್ಯಾವಶ್ಯಕ ಸೇವೆಗಳ ಇನ್‌ಫರ್ಮೇಷನ್ ಕಿಯಾಸ್ಕ್‌ಗಳನ್ನು ತೆರೆಯಲು ಉದ್ದೇಶಿಸಿದೆ.

30) ಸಾರ್ವಜನಿಕ ಕುಂದುಕೊರತೆಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು, ರಾಜ್ಯದಲ್ಲಿರುವ ಎಲ್ಲಾ ನಗರ ಸ್ಥಳೀಯ ಮಂಡಳಿಗಳ ಕೆಲಸಕಾರ್ಯಗಳನ್ನು ಸಂಪೂರ್ಣವಾಗಿ ಗಣಕೀಕರಿಸಲು ಸಹ ಸರ್ಕಾರವು ಉದ್ದೇಶಿಸಿದೆ. ನನ್ನ ಸರ್ಕಾರವು ಹಂತಹಂತವಾಗಿ ರಾಜ್ಯದಲ್ಲಿರುವ ಎಲ್ಲಾ 215 ಸ್ಥಳೀಯ ಸಂಸ್ಥೆಗಳನ್ನು ಗಣಕೀಕರಿಸಲು ಉದ್ದೇಶಿಸಿದೆ. ಈ ಕಾರ್ಯ ಮುಂದಿನ ನಾಲ್ಕು ವರ್ಷಗಳಲ್ಲಿ ಮುಗಿಯಲಿದೆ. ಪೊಲೀಸ್ ಠಾಣೆಗಳೂ ಸೇರಿದಂತೆ ಪೊಲೀಸ್ ಇಲಾಖೆಯನ್ನು ಗಣಕೀಕರಿಸಲು ಸರ್ಕಾರ ಮೂರು ವರ್ಷಗಳ ಯೋಜನೆಯನ್ನು ಕೈಗೆತ್ತಿಕೊಂಡಿದೆ, ಹಾಗೆಯೇ, ಅಧೀನ ನ್ಯಾಯಾಲಯಗಳ ಗಣಕೀಕರಣವನ್ನು ಎರಡು ವರ್ಷಗಳ ಒಳಗೆ

ಪೂರ್ಣಗೊಳಿಸಲಾಗುವುದು.

31) ಸರ್ಕಾರದ ಎಲ್ಲಾ ಹಂತಗಳಲ್ಲಿ ಕನ್ನಡವನ್ನು ಬಳಸುವುದಕ್ಕೆ ನನ್ನ ಸರ್ಕಾರವು, ಬದ್ಧವಾಗಿದೆ. ಸೂಕ್ತ ಕನ್ನಡ ಸಾಫ್ಟ್‌ವೇರ್‌ನ್ನು ಅಭಿವೃದ್ಧಿಪಡಿಸಿ, ಕಂಪ್ಯೂಟರುಗಳಲ್ಲಿ ಕನ್ನಡ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲು ಕ್ರಮ ಕೈಗೊಳ್ಳಲಾಗಿದೆ.

32) ಕಳೆದ ಶತಮಾನದಲ್ಲಿದ್ದ ಆಡಳಿತದ ಪರಿಕಲ್ಪನೆ ಕ್ರಮೇಣ ಬದಲಾಗುತ್ತಾ ಬಂದಿದೆ. ಲಕ್ಷಾಂತರ ಜನರ ಭವಿಷ್ಯವನ್ನು ಗಣ್ಯವರ್ಗವು ನಿಯಂತ್ರಿಸುವ ಕಾಲ ಹೋಯಿತು. ಹಿಂದೆ ಸರ್ಕಾರವು ಒಂದು ನಿಯಂತ್ರಣ ಸಂಸ್ಥೆಯಾಗಿ ಕೆಲಸ ಮಾಡುತ್ತಿತ್ತು. ಈ ಸಹಸ್ರಮಾನದ ಪ್ರಾರಂಭದಲ್ಲಿ, ಸರ್ಕಾರವು ಬದಲಾವಣೆ ಮತ್ತು ಪ್ರಗತಿಯ ಚಾಲಕ ಶಕ್ತಿಯೆಂಬ ವ್ಯಾಖ್ಯಾನ ನೀಡಲಾಗುತ್ತಿದೆ. ಈಗ ಸರ್ಕಾರವು ಸರ್ವ ಸಹಭಾಗಿತ್ವದ ವ್ಯವಸ್ಥೆಯಾಗಿ ರೂಪುಗೊಂಡಿದೆ ಮತ್ತು ಸಾಮಾನ್ಯ ಪ್ರಜೆಗೂ ಇಲ್ಲಿ ಧ್ವನಿಯಿದೆ. ಆದ ಕಾರಣ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ತರಬೇಕಾದ ತೀವ್ರ ಅಗತ್ಯವಿದೆ. ನನ್ನ ಸರ್ಕಾರವು ಆಡಳಿತದಲ್ಲಿ ಭ್ರಷ್ಟಾಚಾರ ಮತ್ತು ಅದಕ್ಷತೆಯನ್ನು ಹೋಗಲಾಡಿಸಿ ಜನಪರ ಆಡಳಿತವನ್ನು ನೀಡಲು ಪ್ರಯತ್ನಿಸುತ್ತದೆ. ಜನರು ಸಹಿಷ್ಣುತೆ, ಶಾಂತಿ ಮತ್ತು ಸಾಮರಸ್ಯದ ವಾತಾವರಣದಲ್ಲಿ ಬಾಳುವ ಸಂಪದ್ಭರಿತ ಕರ್ನಾಟಕದ ಬೆಳವಣಿಗೆಗೆ ಈ ಎಲ್ಲಾ ಕ್ರಮಗಳು ಸಹಕಾರಿಯಾಗಲಿವೆ ಎಂಬ ನಂಬಿಕೆ ನನಗಿದೆ.

ಜೈ ಕರ್ನಾಟಕ, ಜೈಹಿಂದ್

ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ (ಇಂಗ್ಲೀಷ್ ಭಾಷಾಂತರ)

Hon'ble Mr.Chairman, Hon'ble Mr.Speaker and Hon'ble Members.

It is with great pleasure that I welcome you to this joint session of the State Legislature. This is a momentous occasion as it is the first session of the new mellenium. It is also the first time that I am addressing the joint session of this Legislature. We are on threshold of a new age when people begin with fresh hopes and dreams. Karnataka's rich and ancient hertiage co-exists with rapid advancement in science & technology in diverse fields. It will be our endeavour to improve the lives of our people by bringing to them the benefits of modernisation. In pursuance of this commitment the Government is determined to significantly improve the essential sectors such as agriculture, horticulture, animal husbandry, fisheries, drinking water, health, education, social welfare and rural developement.

2) Karnataka has been the home of harmonious co-existence of all sections of the society. This plurality has enriched all aspects of Karnataks's economic, social and cultural scene. Though our state has been a heaven of harmony of all castes adn creeds, there are occasional incidents which disturb social peace. My Government is determined to maintain the rule of law and peace. Any attempt to disrupt law and order will be dealt with in a firm manner.

3) My Government is firmly committed to democratic decentralisation within the frame work of the 73rd Amendment to the Constitution. The Karnataka

Panchayath Raj (Second Amendment) Ordinance. 1999 was issued in December 1999 to facilitate early elctions. Further, the Karnataka Panchayath Raj (Third Amendment) Ordinance, 1999 was issued to ensure a higher level of representation to the scheduled Castes and Scheduled Tribes in Gram Panchayaths. We are satisfied that the elections to Gram Panchayaths have been held smoothly all over the State. This is a tribute to Karnataka's achievement in promoting democratic decentralisation.

4) The intense pressure of population on limited resourced has necessitated increased productivity of agriculture. As sustainable development depends on enhancement of productivity not only in irrigated areas but also in dry areas, a Directorate of Watershed Development has been created for this purpose. The paramountcy of agriculture was recognised in the Agro-Summit 2000 held in Dharwad recently where attention was focussed on challenges posed by hunger and malnutriton. My Government intends to establish a Karnataka Agriculture Commission which will evolve a policy frame work for agriculture. A cabinet sub-committee headed by the Hon'ble Chief Minister has been constituted to reassess agricultural policies and targets.

5) Karnataka holds an eminent position in the country in the field of Horticulture. The State has the distinction of forming the first separate department of Horticulture in the country in 1963. The area under horticulture has increased by 27% and the production by 22% in the last five years. Floriculture units have been set up in and around Bangalore with an investment of more than

Rs.500 crores. The rapid growth of horticulture and floriculture has been made possible by the cost effective green house technology for even small and marginal farmers.

6) Recognising the importance of Agriculture, Animal Husbandry, Horticulture, Dairy Development and allied activites, the Governement of Karnataka has entered into a Memorandum of Understanding with National Dairy Development Board for the technical and financial support. The N.D.D.B. will extend financial support in excess of Rs.500 crores for the above mentioned sectors.

7) As Marine fish production in the State has almost reached the saturation point, develpment of inland fisheries will be a priority of the Government. Our State is endowed with over 5 lakh hectares of inland water resources in the form of tanks and reservoirs which provide potential for inland fisheries development. Attention will be focussed on extension services and training to enhance productivity in this sector.

8) Karnataka continues to be at the forefront in respect of production of mulberry raw silk. Last year 8,944 Metric Tonnes of raw silk was produced, accounting for 63% of the total silk produced in the country. Sericulture is still a major source of livelihood for over 3 million people in the State. The Government is undertaking several measures to increase the productivity of the sericulture sector.

9) The State Government is seriously concerned about the shortage of drinking water in some of the small and medium towns of the State. To remedy this situation. Government has drawn up an action plan to cover all

these towns with protected potable water supply within the next four years at a cost of Rs.485 crores. This will be taken up with the assistance of HUDCO.

10) A high level Task Force has been constituted under the Chairmanship of Dr.H.Sudarshan to recommend measures to improve the health delivery system in the State. A plan for strengthening the basic minimum services in the State is being fromulated. Karnataka continues to perform well in the field of population stabilisation.

11) We have made impressive strides in the area of elementary education and literacy in the last decade-nevertheless much more remains to be done. In the first year of the new millenium we will consolidate the gains of the past decade by providing 11000 more classrooms and 7500 more Primary School Teachers. It is proposed to redeploy teachers within the districts to ensure that there are no single teacher schools in the State and all Primary Schools have a teacher-pupil ration of 1 : 40. It is also proposed to introduce Engineering Courses in the thrust areas to cater to the manpower needs of Industrial Sector as well as introduce Computer Education as part of the curriculum in colleges. Rules for grant of autonomy to well equipped and viable colleges will be framed.

12) My Government is committed to the progress and improvement in the status of women. Financial assistance to promote the economic emancipation of women under various schemes such as Vikasini, Navajivini and Swashakti is under implementation. Under ICDS programme, supplementary nutrition, health

services and non-formal education is being provided for women and children. Scholarships for girls, accomodation for working women and girls in hostels, as well as training for self employment of rural women will be given primacy during the current year.

13) My Government is committed to the welfare and overall development of Scheduled Castes and Scheduled Tribes. Several schemes which would directly benefit scheduled Castes and scheduled Tribes and lead to a qualitative improvement in their lives are being implemented. Action is being taken for starting seven new Morarji Desai Residential Schools in those where there are no such Schools for SCs & STs. In order to provide better accommodation, construction of 85 new hostel buildings are being taken up.

14) My Government proposes to impart special skells to unemployed youth belonging to Scheduled Castes, Scheduled Tribes, Backward Classes & Minorites in order to enable them to compete successfully in the job market. As part of this programme, it is proposed to include a module on counselling and placement assistance so that the candidates who have undergone training are enabled to perform effectively in interviews for employment. Special emphasis will also be laid on acquistion of skills for self-employment.

15) In the co-operative sector, the scheme of Government contributing the share capital for Scheduled Castes and Scheduled Tribes members will be implemented. The scheme will benefit Scheduled Caste and Scheduled Tribe persons to become members of cooperative institutions, thereby enabling them to improve their economice well-being.

16) My Government is equally committed to the welfare of Backward Classes. The Backward Classes Development Corporation is implementing economic development schemes targetting beneficieries from the Backward Classes. Fifteen new pre-matric hostels and ten post-matric hostels for Backward Classes girls have been sanctioned during 1999-2000.

17) The Miniority Development Corporation is implementing economic development scheme targetting beneficiaries from the minorities. During the current year, specail emphasis will be given for training of minorities in new technologies. Four residential schools have been sanctioned exclusively for Minorities. The scheme of Government contributing the share capital for persons belonging to minority community to become members of the co-operative societies will be introduced.

18) My Government has accorded top priority for completion of Major Irrigation projects which are in various stages of completion to bring water to the fields of our farmers. Recent achievements in this sector were the release of water in the Narayanpur Right Bank Canal and Jewargi Branch Canal. A major step to improve the irrigation efficeiency has been taken with the establishment of Water User's Co-operative Societies through which the farmers will manage and monitor the distribution of water.

19) The Cauvery Water Disputes Tribunal is adjudicating the dispute between the riparian states of Cauvery Basin. My Govenment is taking all necessary measures to safeguard the interest of farmers in Cauvery Basin. Similarly my Government is also taking all

necessary steps to utlize the state's share of water in Krishna Basin.

20) Under AIBP scheme of Central Government an amount of Rs.246 crores has been obtained for UKP Stage-I, Phase-III, Malaprabha, Hirehalla, Ghataprabha-III and Karanja Irrigation Projects.

21) To maintain environmental stability in new irrigation projects, it has been planned to develop greeneries along the canals, sub-canals and distributaries of irrigation projects in the State. A major project for desilting and repairing Minor Irrigation Tanks is planned for implementation during 2000-2001.

22) My Government has a programme of constructing 2 lakh houses per year for the economically weaker sections of the population. To ensure efficient and speedy implementation of an expanded housing programme, Government has snactioned the establishment of Rajiv Gandhi Rural Housing Corporation. This new Corporation will implement housing programmes for the poor, including Ashraya rural and urban, Ambedkar housing as well as housing schemes for mine workers, beedi workers, fishermen, hamals, weavers and other workers in the unorganised sectors. However, Indira Avas Yojana will continue to be implemented by the Zilla Panchayats.

23) As roads are the arteries of economic development and communication, my Government has focussed attention on improvement of highways, bridges and roads. The Karnataka Road Development Corporation has already raised an amount of Rs.200 crores to take up major road works. This Corporation ia also taking up a

massive programme of repair and construction of 131 brigdges all over the State. These bridges are proposed to be completed in a period varying from 9 to 24 months. My Government intends to lay special emphasis to improve major State Highways and major district roads and work in this direction has already commenced. A special initiative has also been taken to improve rural roads and the newly created Rural Development Engineering Department is expected to improve and upgrade 10,000 Kms. in the coming year.

24) In the Power sector, my Government intends to make electric power available to all sections of people, in an affordable and efficient manner, The karnataka Electricty Regulatory Commission has been given the responsibility of tariff determination, licensing of transmission and distribution entities, and generally overseeing the improvements needed in this sector. Both technical and administrative measures are being taken in an effort to bring down the transmission and distribution losses.

25) My Government has approved in principle the privatisation of distribution of power. A compreshensive programme, designed for effective private sector management and investment in the distribution of power will be initiated. I hope that the private participation in this area will fruitify within next two years. We have the support of the Government of India with whom a Memorandum of Agreement was signed on 12th of February, 2000. We hope to obtain assistance from funding agencies including the World Bank to assist us in this endeavour. My Government is also encouraging renewable energy sources, such as, wind, mini-hydel and

co-generation in sugar factories. The Kaiga Nuclear Plant has commenced generation from December 1999. Out of the 220 Mega Watts being generated there, 54 Mega Watts is Karnataka's share. Work on Unit VII of Raichur Thermal Power Station (210 MW) and the Vijayanagar Thermal Power Station (500MW) will be commenced shortly.

26) A new transport policy to improve passenger facilities and amenities both in rural and urban areas is being considered by the Government. Metro buses with a larger capacity are proposed to be introduced on designated lanes to improve public transport in Bangalore City. A new Corporation called North-East Karnataka Road Transport Corporation consisting of Gulbarga, Bidar, yadgir, Koppal, Bellary and Raichur is proposed to be established during the year 2000-2001

27) After a period of recession in the industrial sector, the State economy is now improving. As investor friendly environment has been created by the Government to make Karnataka the most preferred destination for investement in the country. A Global investors meet is scheduled to be held in June 2000. My Government is committed to the growth and rehabilitation of small scale indutries.

28) My Government is aware of the value of Information Technology for facilitating and simplifying essential services systems for people in all spheres and for creating employment opportunities to the educated youth. To accelerate the process a Task Force on Information Technology has been established with Shri.N.R.Narayanan Murthy who is Chairman Infosys

Ltd. as its Chairman Renowned Captains of Information Technology Industries such as Shri Azim Premji, Chairman Wipro and Shri Gururaj Deshpande C.E.O Sycamore Networds are members of the Task Force.

29) My Government also belives in the citizen's right to information. To provide 'one stop' access to most of these services, the Government intends to install information kiosks in various public places to access information on essential services.

30) My Government also proposed to fully compurterise the functions of all the Urban Local Bodies in the State to ensure speedy disposal of the grivances of the general public. My Government is therefore, planning computerisation of all the 215 local bodies in the State in a phased manner which will be completed in the next four years. Government also has taken up a three year scheme of computerisation of Police Department, including Police Station. Similarly, computerisation of the judiciary in the lower courts will be completed within next tow years.

31) My Government is committed to the use of Kannada at all levels of the Government. Action has been taken for the effective use of Kannada Languagae in Computers by developing suitable Kannada Software.

32) The concept of government has been gradually transformed in the last century. It is no longer an elite group controlling the destinies of millions of people. At the commencement of the mellenium the role of Governmet is being redefined as a catalyst for change and progress rather than as an agency or regulation. Governance has become a participatory institution in

which the humblest citizen has a voice. Hence, there is an urgent need to promote transparency and accountability in administration. My Government will ceaselessly try to weed out corruption and inefficiency in administration on the one hand and promote people friendly governance on the other hand. I hope that all these measures will contribute to the growth of a prosperous Karnataka where people can live in an atmosphere of tolerenace, peace and harmony.

Jai Karnataka, Jai Hind.